ಕ್ಯಾನ್ಸರ್ ಆಗಿಬಿಟ್ಟಿದೆ. ಇದರಿಂದ ಜಾನುವಾರು ವ್ಯಾಪಾರ ಮಾಡುತ್ತಿದ್ದ ನಮಗೆ ಜೀವನೋಪಾಯದ ಎಲ್ಲ ದಾರಿಗಳೂ ಮುಚ್ಚಿ ಹೋಗಿವೆ. ರಾಜಕೀಯದವರಿಗೆ ಇದು ಹೊಸದೊಂದು ದಂಧೆ. ಇವರ ಬೆಂಬಲವಿಲ್ಲದೆ ಜಾನುವಾರುಗಳನ್ನು ಎರಡು ಕಿ.ಮೀ.ಗಿಂತ ಹೆಚ್ಚು ದೂರ ಸಾಗಿಸುವುದು ಈಗ ದೊಡ್ಡ ಸಾಹಸವೇ ಸರಿ. ಎಲ್ಲರಿಗೂ ಸಮಸ್ಯೆ, ಯಾರಲ್ಲಿ ಹೇಳುವುದು? ಅಬ್ದುಲ್ಲಾ ತಮ್ಮ ಗೋಳು ವಿವರಿಸಿ ''ನನ್ನ ಪರಿಚಯದವನೊಬ್ಬ ಇದ್ದಾನೆ. ರಿಸ್ಕ್ ತೆಗೆದುಕೊಂಡು ಸ್ವಲ್ಪ ಆಚೀಚೆ ಸಾಗಾಟ ಮಾಡ್ತಾನೆ. ಅವನನ್ನು ಕೇಳಿನೋಡುತ್ತೇನೆ'' ಎಂದು ಫೋನ್ ಮಾಡಿದ. ವಿವರವನ್ನೆಲ್ಲ ಹೇಳಿ ನಮ್ಮ ನೆರೆಕರೆಯವರು ಎಂದೂ ಸೇರಿಸಿ ''ಇನ್ನು ನೀವು ಮಾತಾಡಿ'' ಎಂದು ಫೋನ್ ಕೊಟ್ಟ.

''ನಿಮ್ಮ ಮನೆಯಲ್ಲಿರುವ ದನವನ್ನು ಕುಂದಾಪುರದಲ್ಲಿರುವ ನಿಮ್ಮ ಹೆಂಡತಿ ತಂಗಿಯ ಮನೆಗೆ ತಲುಪಿಸಬೇಕು. ದನ ಮಾತ್ರ... ಕರು ಇಲ್ಲವಾ?'' ಅಂದ.

''ಕರು ಇದೆ, ಆದರೆ ದೊಡ್ಡದು. ಗಂಡು ಕರು. ಸಾಮಾನ್ಯ ದನದಷ್ಟೇ ಎತ್ತರ ಇದೆ. ಅದನ್ನು ಕೊಂಡು ಹೋಗದಿದ್ದರೂ ನಡೆಯುತ್ತದೆ. ಇಲ್ಲೇ ಒಬ್ಬರು ನಮ್ಮ ಕೊಟ್ಟಿಗೆಯಲ್ಲಿರಲಿ ಅಂದಿದ್ದಾರೆ'' ಎಂದರು ಮೂರ್ತಿ.

''ಕೊಂಡು ಹೋದರೂ ಪ್ರಯೋಜನ ಇಲ್ಲ... ಸಣ್ಣ ಕರು, ಹಾಲೂಡುವ ದನ ಆದ್ರೆ ದನವನ್ನು ಕಸಾಯಿಖಾನೆಗೆ ಕೊಂಡುಹೋಗುತ್ತಿದ್ದಾರೆ ಎನ್ನುವ ಅನುಮಾನ ಬರುವುದಿಲ್ಲ. ಇವತ್ತಿನ ಅರ್ಧ ಸಮಸ್ಯೆ ಇದೇ. ದನವನ್ನು ವಾಹನ ಹತ್ತಿಸಿದರೆ ಸಾಕು, ಕಸಾಯಿಗೆ ಕೊಂಡುಹೋಗುತ್ತಿದ್ದಾರೆ ಎಂದೇ ಲೆಕ್ಕ ಹಾಕ್ತಾರೆ'' ಆತ ಪುನಃ ಅದೇ ಮಾತನ್ನು ಹೇಳಿದ.

''ನಾಲ್ಕಾರುದಿನಗಳಿಂದ ಇದನ್ನೇ ಕೇಳುತ್ತಿದ್ದೇನೆ...'' ಅಂದರು ಮೂರ್ತಿ ಅಸಹನೆಯಿಂದ. ''ಕಸಾಯಿಗಲ್ಲ, ನನ್ನ ದನ, ಮನೇಲಿ ಸ್ವಲ್ಪದಿನ ನಾವಿರೋಲ್ಲ, ಹಾಗೆ ನನ್ನ ಸಂಬಂಧಿಕರಲ್ಲಿ ಬಿಡಲು ಕೊಂಡು ಹೋಗ್ತಾ ಇದ್ದೇನೆ ಎಂದು ವಿವರಿಸಿ ಹೇಳಲು ಬೇಕಿದ್ರೆ ನಾನೂ ನಿಮ್ಮೊಂದಿಗೆ ಬರ್ತೇನೆ'' ಅಂದರು ಮೂರ್ತಿ.

''ನಿಮ್ಮನ್ನು ಮಾತಾಡಲು ಬಿಟ್ಟರಲ್ಲವೇ? ನೀವು ಬಂದ್ರೆ ನಿಮ್ಮ ಬೆನ್ನಿಗೂ ಬೀಳುತ್ತದೆ. ನಾವು ಓಡಿ ತಪ್ಪಿಸಿಕೊಳ್ಳುತ್ತೇವೆ. ಓಡಲೂ ಆಗದ ಈ ವಯಸ್ಸಿನಲ್ಲಿ ನೀವು ಪೆಟ್ಟು ತಿಂದು ಸಾಯ್ತೀರಿ'' ಅಂದ ಆತ.

''ಬೇರೇನು ಉಪಾಯ ಹೇಳಿ...'' ಅಂದರು ಹತಾಶ ಮೂರ್ತಿ.

''ನಮ್ಮ ಪರಿಚಯದವರೊಬ್ಬರು ಕೆಲವೊಮ್ಮೆ ಪ್ರೊಟೆಕ್ಷನ್ನಿನಲ್ಲಿ ದನಸಾಗಾಟ ಮಾಡ್ತಾರೆ. ಯಾವಾಗ ಅವರ ಟ್ರಿಪ್ ಇರುತ್ತೋ ಆಗ ಸಾಗಿಸಬೇಕು. ಒಂದು ವಾರದಲ್ಲೆಲ್ಲ ಅನುಮಾನ. ಭರವಸೆ ಕೊಡಲಾರೆ, ಕೇಳಿ ಹೇಳ್ತೇನೆ'' ಅಂದರಾತ.

